**<u>ದಿನಾಂಕಃ 06-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ</u>**

ನಿ.ಪಿ-27 ಮತ್ತು 28 : 2 ಡಿಸ್ಚಾರ್ಜ ಸಮರಿಗಳು

ನಿ.ಪಿ-29 : ಒಟ್ಟು 29 ಮೆಡಿಕಲ್ ಬಿಲ್ ಗಳು

ನಿ.ಪಿ-30 : ಒಟ್ಟು 6 ಅಂಬುಲೆನ್ಸ ಬಿಲ್ ಗಳು

ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀಮತಿ ವೈವಿಡಿ ವಕೀಲರಿಂದಃ</u>**

1. ಅಪಘಾತ ಓಮಿನಿ ಮತ್ತು ಕೆ ಎಸ್ ಆರ್ ಟಿ ಸಿ ಬಸ್ ನಡುವೆ ಆಗಿರುತ್ತದೆ. ನಾನು ಓಮಿನಿ ಚಾಲಕನ ಪಕ್ಕದ ಸೀಟ್ ನಲ್ಲಿ ಕುಳಿತದ್ದೆನು. ಅಪಘಾತ ಆದಾಗ ಮದ್ಯಾಹ್ನ 12 ಗಂಟೆಯಾಗಿತ್ತು. ದಿಃ 11-04-2024 ರಂದು ಅಪಘಾತ ಆಗಿರುತ್ತದೆ. ನಮ್ಮ ಕಾರಿನ ಚಾಲಕ ಸಾಧಾರಣ ವೇಗದಲ್ಲಿ ಹೋಗುತ್ತಿದ್ದನು. ಎದುರುರಿನಿಂದ ಕೆ ಎಸ್ ಆರ್ ಟಿ ಸಿ ಬಸ್ ಬಂದು ಡಿಕ್ಕಿ ಪಡಿಸಿರುತ್ತದೆ. ನಮ್ಮ ಕಾರಿನ ಚಾಲಕ ಮುಂದೆ ಹೋಗುತ್ತಿದ್ದ ವಾಹನವನ್ನು ಓವರ್ ಟೇಕ್ ಮಾಡಲು ಹೋಗಿ ಬಸ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರೂ ಸಹ ನಮ್ಮ ಚಾಲಕನೇ ವಾಹನ ಓವರಟೇಕ್ ಮಾಡಲು ಹೋಗಿ ಬಸ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಅಪಘಾತ ಓಮಿನಿ ಚಾಲಕನ ತಪ್ಪಿನಿಂದ ಆಗಿರುವುದರಿಂದ ಕೆ ಎಸ್ ಆರ್ ಟಿ ಸಿ ಬಸ ನವರು ಯಾವುದೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

2. ಓಮಿನಿ ಯನ್ನು ನನ್ನ ದೂರದ ಸಂಬಂಧಿ ದೇವರಾಜ ನಡೆಸುತ್ತಿದ್ದನು. ಆತನು ಸಹ ಅಪಘಾತದಲ್ಲಿ ಮೃತ ಪಟ್ಟಿರುತ್ತಾನೆ. ಆತನಿಗೆ ಡಿ ಎಲ್ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಓಮಿನಿಗೆ ಯಾವ ಕಂಪನಿಯಲ್ಲಿ ಇನ್ಸುರೆನ್ಸ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಓಮಿನಿ ಚಾಲಕ ಜೋರಾಗಿ ಹೋಗಿ ಕೆ ಎಸ್ ಆರ್ ಟಿ ಸಿ ಬಸ್ ಗೆ ಡಿಕ್ಕಿ ಪಡಿಸಿದ್ದರಿಂದ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಎರಡೂ ಕಾಲಿನ ಮೂಳೆ ಮುರಿತ ಆಗಿರುತ್ತದೆ . ಎರಡೂ ಕಾಲಿನ ಮೊಣಕಾಲಿನ ಕೆಳಗೆ ರಾಡ್ ಹಾಕಿರುತ್ತಾರೆ. ತೊಡೆಯ ಮಾಂಸ ತೆಗೆದು

ಮೊಣಕಾಲಿನ ಕೆಳಗೆ ರಾಡ್ ಹಾಕಿರುತ್ತಾರೆ. ಪಾದದ ಮೂಳೆ ಮುರಿತ ಆಗಿರುತ್ತದೆ. ಬಲಗೈನ ತೋರುಬೆರಳು ಅಂಗಚೇಧ ಆಗಿರುತ್ತದೆ. ನನ್ನ ಎಡಗೈ ಮುಂಗೈಗೂ, ಎಡಭುಜ ಹಾಗೂ ಬಲಗೈನ ಮುಂಗೈಗೂ ಪೆಟ್ಟಾಗಿರುತ್ತದೆ. ಎಡಗಾಲಿನ ಪಾದದ ನರಗಳು ತುಂಡಾಗಿರುತ್ತವೆ.

3. ಅಪಘಾತ ಆದ ತಕ್ಷಣ ನನ್ನನ್ನು ನಂಜಪ್ಪ ಆಸ್ಪತ್ರೆ ಗೆ ಕರೆದುಕೊಂಡು ಹೋಗಿರುತ್ತಾರೆ ಅಲ್ಲಿಂದ ಮಣಿಪಾಲ್ ಕಸ್ತೂರ ಬಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂಜಪ್ಪ ಆಸ್ಪತ್ರೆಯಲ್ಲಿ 3-4 ಗಂಟೆ ಮಾತ್ರ ಇದ್ದನು. ಅಲ್ಲಿಂದ ಅವತ್ತೆ ಕಸ್ತೂರ ಬಾ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿ 2 ತಿಂಗಳು ಒಳರೋಗಿಯಾಗಿದ್ದನು. ಒಟ್ಟು 5 ಬಾರಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಮಣಿಪಾಲ್ ಆಸ್ಪತ್ರೆಯಿಂದ ಡಿಸ್ಚಾರ್ಜ ಆಗಿ ಬಂದ ನಂತರ ಬೇರೆ ಎಲ್ಲೂ ಸಹ ಒಳರೋಗಿಯಾಗಿ ದಾಖಲಾಗಿರುವುದಿಲ್ಲ, ಸಾಕ್ಷಿ ಮುಂದುವರೆದು ಎಸ್ ಎಸ್ ಐ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಬರುತ್ತಿದ್ದೆ ಎಂದು ಹೇಳುತ್ತಾರೆ. ಎಸ್ ಎಸ್ ಐ ಆಸ್ಪತ್ರೆ ಯಲ್ಲಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಹೋಗಿರುತ್ತೇನೆಯೇ ಹೊರತು ಚಿಕಿತ್ಸೆಪಡೆಯಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ನಿತಿನ್ ಎ ಬಿ ಅವರಿಂದ ಚಿಕಿತ್ಸೆ ಪಡೆದಿರುತ್ತೇನೆ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಎಕ್ಸರೆ , ಸ್ಕ್ಯಾನಿಂಗ್ ಮಾತ್ರೆ, ಇಂಜೆಕ್ಷನ್ ಕೊಟ್ಟಿರುತ್ತಾರೆ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಕೇವಲ ಅಂಗನ್ಯೂನ್ಯತೆ ಮಾತ್ರ ಪಡೆಯಲು ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಈಗ ಸಂಪೂರ್ಣ ಗುಣಮುಖವಾಗಿದ್ದು, ದಿನನಿತ್ಯದ ಕೆಲಸ ಮಾಡಲು ಯಾವುದೆ ತೊಂದರೆ ಇಲ್ಲ ಎಂದರೆ ಸರಿಯಲ್ಲ.

4. ನನ್ನ ಚಿಕಿತ್ಸೆಗಾಗಿ ರೂ.18,50,000/- ಖರ್ಚು ಮಾಡಿದ್ದು ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಇನ್ನು ರೂ.10,50,000/-ಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನನಗೆ 55 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ 44 ವರ್ಷ ಆಗಿತ್ತು ಎಂದು ಹೇಳುತ್ತಾರೆ. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಹುಟ್ಟಿದ ದಿನಾಂಕ 23-12-1979 ಆಗಿರುತ್ತದೆ. ನಾನು ಹೊಲ ಮನೆ ಕೆಲಸ , ಡ್ರೈವಿಂಗ್ ಕೆಲಸ , ನ್ಯೂಸ್ ಪೇಪರ್ ಎಜೆಂಟ ಕೆಲಸ ಮಾಡುತ್ತಿದ್ದೆ. ನನಗೆ ತಿಂಗಳಿಗೆ ರೈತಾಪಿ ಕೆಲಸ ಹಾಗೂ ವ್ಯಾಪಾರದಿಂದ ರೂ.30 ಸಾವಿರ ಸಂಪಾದನೆ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೆ ದಾಖಲೆ ಹಾಜುರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಶಾಲಾ ದಾಖಲಾತಿ ಹಾಜರುಪ ಡಿಸಿದರೆ ನನಗೆ ಹೆಚ್ಚಿನ ವಯಸ್ಸಾಗಿದೆ ಎಂದು ಗೊತ್ತಾಗುತ್ತದೆ ಎಂದು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

5. ನನಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ

ಸಹ ಶೇ 60 ರಷ್ಟು ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಪ್ರಮಾಣ ಪತ್ರ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಮೆಡಿಕಲ್ ಬಿಲ್ ಗಳಿಗೂ ನನಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಅಪಘಾತ ಸಂಪೂರ್ಣವಾಗಿ ಓಮಿನಿ ಚಾಲಕನ ತಪ್ಪಿನಿಂದ ಆಗಿದೆ ಎಂದು ಗೊತ್ತಿದ್ದರೂ ಸಹ ಮಾನ್ಯ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೂಳೆ ಮುರಿತಗಳು ಸರಿಯಾಗಿ ಜೋಡಣೆ ಆಗಿರುತ್ತವೆ ಎಂದರೆ ಸರಿಯಲ್ಲ. ಈಗ ನಾನು ಸಂಪೂರ್ಣವಾಗಿ ಗುಣಮುಖವಾಗಿರುತ್ತೇನೆ ಎಂದರೆ ಸರಿಯಲ್ಲ. ಆರ್ಥಿಕವಾಗಿ, ಮಾನಸಿಕವಾಗಿ ಹಾಗೂ ದೈಹಿಕವಾಗಿ ಯಾವುದೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ಜೀವನ ಮೊದಲು ಹೇಗೆ ಸಾಗುತ್ತಿತ್ತೊ ಈಗಲೂ ಹಾಗೆ ಸಾಗುತ್ತಿದೆ ಎಂದರೆ ಸರಿಯಲ್ಲ. ಓಮಿನಿಯಲ್ಲಿ ನಿಗದಿ ಪಡಿಸಿದಕ್ಕಿಂತ ಹೆಚ್ಚಿನ ಜನರು ಪ್ರಯಾಣಿಸುತ್ತಿದ್ದರಿಂದ 2 ನೇ ಎದುರುದಾರರು ಯಾವುದೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.